ಓ.ಎಸ್ ನಂಃ 510/2014

ಪಿ .ಡಬ್ಲು-*2*

ಸಾಕ್ಷಿಯನ್ನು ದಿನಾಂಕಃ 19.07.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿ ಪರ ಶ್ರೀ. ಕೆ ವಿ ಪಿ ವಕೀಲರಿಂದ**

ನ್ಯಾಯಾಲಯದ ಮುಂದಿರುವ ವಾದಿ 1 (ಎ) ರವರು ಏನಾಗಬೇಕು ಎಂದರೆ ನನ್ನ ತಾಯಿಯ ತಂಗಿಯ ಮಗ ಎಂದು ನುಡಿಯುತ್ತಾರೆ. ನಿಮಗೂ ಹಾಗೂ ವಾದಿ 1 (ಎ) ರವರಿಗೂ ವೈಮನಸ್ಸು ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ರಹೀಂ ಬೀ ರವರು 2014 ರಲ್ಲಿ ಹೂಡಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯು ಮೊದಲಿಗೆ ವಜಾಗೊಂಡಿರುತ್ತದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾಯಿ ನಿಮ್ಮ ಜೊತೆ ಇರುತ್ತಾರಾ ಅಥವಾ ವಾದಿ 1 (ಎ) ರವರ ಜೊತೆಯಲ್ಲಿ ಇರುತ್ತಾರಾ ಎಂದರೆ ನಮ್ಮ ಜೊತೆಯಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ನಿಪಿ 1 ರ ಅರ್ಜಿಯನ್ನು ನೀಡಿ ಎಷ್ಟು ವರುಷಗಳಾಗಿರುತ್ತದೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾಯಿಗೆ ಪಡಿತರ ಚೀಟಿಯನ್ನು ನೀಡಿರುತ್ತಾರಾ ಹಾಗೂ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಪಡಿತರ ಚೀಟಿಯನ್ನು ನೀಡಿರುತ್ತಾರೆ ಅದರೆ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲವೆಂದು ನುಡಿಯುತ್ತಾರೆ.

ನಿಪಿ 2 ನನ್ನ ವ್ಯಾಸಂಗಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿ . ನಿಪಿ 2 ರಲ್ಲಿ ನಿಮ್ಮ ತಾಯಿ ಹೆಸರು ನಮೂದು ಇರುವುದಿಲ್ಲ ಎಂದರೆ ಸರಿ . ನಿಪಿ 3 ರಲ್ಲಿ ನಿಮ್ಮ ತಾಯಿಯ ಹೆಸರು ನಮೂದು ಮಾಡಿರುವುದಿಲ್ಲ ಎಂದರೆ ಸರಿ . ವಾದಿ 1 (ಎ ) ರವರು ನ್ಯಾಯಾಲಯಕ್ಕೆ ಅಧಾರ್ ಕಾರ್ಡ್ ನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಮಗೆ ಸಂಬಂಧಿಸಿದ ಅದಾರ್ ಕಾರ್ಡ್ನ್ನು ನ್ಯಾಯಾಲಯಕ್ಕೆ ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿ 1 (ಎ) ರವರು ರಹೀಂ ಬೀ ರವರ ಮಗ ಅಗಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಯು ಉರ್ದುವಿನಲ್ಲಿ ಮಾತ್ರ ಸಹಿ ಮಾಡುತ್ತಾರೆ ಎಂದರೆ ಇಂಗ್ಲಿಷ್ ಮತ್ತು ಉರ್ದು ಬಾಷೆಯಲ್ಲಿಯೂ ಸಹ ಸಹಿ ಮಾಡುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ವಾದಿ .1 (ಎ) ರವರಿಗೆ ದಾವಾ ನಡೆಸಲು ಅಧಿಕಾರ ಪತ್ರವನ್ನು ನೀಡಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ವಾದಿ 1 (ಎ) ರವರು ವಾದಿ ರಹೀಂ ಬೀ ರವರ ಮಕ್ಕಳಾಗಿದ್ದು ನೀವು ಮನೆಯನ್ನು ಬಿಟ್ಟು ಹೋಗಿ 25 ವರುಷಗಳಾಗಿರುತ್ತದೆ ಎಂದರೆ ಸರಿಯಲ್ಲ. ನೀವು ಈಗ ಕೋಲಾರದಲ್ಲಿ ವಾಸವಾಗಿರುತ್ತೀರಿ ಎಂದರೆ 5 ರಿಂದ 6 ವರುಷಗಳಿಂದ ವಾಸವಾಗಿರುತ್ತೇನೆ ಎಂದು ನುಡಿಯುತ್ತಾರೆ.

ವಾದಿ ರಹೀಂ ಬೀ ರವರು ತೀರಿಕೊಂಡಾಗ ವಾದಿ 1 (ಎ) ರವರು ಎಲ್ಲಾ ಖರ್ಚುಗಳನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ತಾಯಿಯು ಜೀವಂತವಾಗಿರುವರೆಗೂ ವಾದಿ 1 (ಎ) ರವರ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ 1 (ಎ) ರವರು ರಹೀಂ ಬೀ ರವರ ಮಗನಲ್ಲ ಎಂದು ದೂರನ್ನು ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ದಾವಾದಲ್ಲಿ ನೀವು ಪ್ರತ್ಯಕ ಅರ್ಜಿಯನ್ನು ಸಲ್ಲಿಸಿ ನೀವು ಒಬ್ಬರೇ ರಹೀಂ ಬೀ ರವರ ಮಗ ಎಂದು ಹೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಾದಿ 1(ಎ) ರವರಿಗೆ ಮೋಸ ಮಾಡುವ ಉದ್ದೇಶದಿಂದ ದಾವಾ ಸ್ವತ್ತನ್ನು ಲಟಪಾಯಿಸುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.
ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುವಂತೆ ವಾದಿ 1 (ಎ) ರವರು ಮಹ್ಮದ್ ಇಸ್ಮಾಯಿಲ್ ಮತ್ತು ಷಪೀರಾ ಬೀ ರವರ ಮಗ ಎಂದು ತೋರಿಸಲು ದಾಖಲಾತಿಯನ್ನು ನೀಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)**

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

**(ಮಂಜು ಎಂ)**

**2 ನೇ ಅಪರ ಸಿವಿಲ್ ನ್ಯಾಯಾಧೀಶರು**

ಮತ್ತು ಜೆಎಂಎಫ್‌ಸಿ, ಕೆ.ಜಿ.ಎಫ್